**ಕೃಷ್ಣಮೂರ್ತಿ ಚಂದರ್**

# ಟ್ರೈಕೋಟಿಲೋಮೇನಿಯಾ



ಶ್ರೀನಿವಾಸರಾಯರಿಗೆ ಯಾಕೋ ಈ ಸಂಬಂಧ ಬೆಳೆಸೋದು ಸರಿಯಲ್ಲ ಅಂತ ಅನಿಸಹತ್ತಿದ್ದು ಅವರು ತಾವು ಮದುವೆ ಆಗಬೇಕಂತ ಒಪ್ಪಿಗೆ ಕೊಟ್ಟಿದ್ದ ಅಹಲ್ಯಬಾಯಿಯವರನ್ನ ಶನಿವಾರ ಸಾಯಂಕಾಲ ಹೋಟೆಲಿಗೆ ಮೊದಲಬಾರಿ ಕರೆದುಕೊಂಡು ಹೋದಾಗ! ಇದೆಂಥದ್ದು, ಕಂಡದ್ದು, ಕೇಳದ್ದೂ ಅಂತ ಅವರ ಅಜ್ಜಿ ಹೇಳಿದರೂ, ಅದು ಕೇಳಿಸಿದರೂ ಕೇಳಿಸದ ಹಾಗೆ ನಟಿಸುತ್ತ ಅಹಲ್ಯಬಾಯಿಯವರನ್ನ ಹೋಟೆಲ್ ದಾಸಪ್ರಕಾಶಗೆ ಕರೆದುಕೊಂಡು ಹೋಗುವ ಸಾಹಸ ಮಾಡಿದಾಗ! ಅವರ ಮನೆಯ ಮುಂದೆ ತಮ್ಮ ಹರ್ಕ್ಯುಲಿಸ್ ಬೈಸಿಕಲ್ ಅನ್ನು ನಿಲ್ಲಿಸಿ, ಸ್ಟ್ಯಾಂಡ್ ಹಾಕಿ, ಲಾಕ್ ಮಾಡಿದ್ದರೂ ಆಕೆಯ ಜೊತೆ ವಾಕಿಂಗ್ ಹೊರಟಾಗ ಯಾಕೋ ಏನೋ ಇವರಿಗೂ ದಿಗಿಲಾಗಿ ಸೈಕಲನ್ನು ಎಳೆದುಕೊಂಡು ನಡೆದರು. ಮತ್ತೆ ಮತ್ತೆ ಪ್ಯಾಂಟಿನ ಜೇಬಿಗೆ ಕೈಹಾಕಿ ತಾವು ತಂದಿದ್ದ ಹತ್ತು ರೂಪಾಯಿ ಚಿಲ್ಲರೆ ಇದೆಯೇ ಅಂತ ಮುಟ್ಟಿ ಮುಟ್ಟಿ ಖಚಿತ ಪಡಿಸಿಕೊಂಡರು.

ಈ ಕಡೆ ಶ್ರೀನಿವಾಸರಾಯರು, ಆ ಕಡೆ ಅಹಲ್ಯಬಾಯಿ, ಮಧ್ಯ ಹರ್ಕ್ಯುಲಿಸ್! ಹೋಟೆಲ್ ದಾರಿಯಲ್ಲಿ ರಾಯರು ಎಷ್ಟು ಪ್ರಯತ್ನ ಪಟ್ಟರೂ ಆಕೆ ತುಟಿಪಿಟಿಕ್ ಅನ್ನದಿದ್ದನ್ನ ನೋಡಿ ನಾಚಿಕೆಗೋಸ್ಕರ ಇರಬೇಕು ಅಂದುಕೊಳ್ಳುತ್ತಿದ್ದ ಹಾಗೆ ಆಕೆ ಸರಕ್ಕನೆ ರಸ್ತೆಯ ಮಧ್ಯದಲ್ಲೇ ನಿಂತು ಏನೋ ಗಹನವಾಗಿ ಚಿಂತಿಸುತ್ತಿದ್ದುದ್ದನ್ನ ನೋಡಿ ರಾಯರಿಗೆ ಆಶ್ಚರ್ಯ, ಕಸಿವಿಸಿ ಎರಡೂ ಒಂದೇ ಸಮಯಕ್ಕೆ ಉಂಟಾಗಿ 'ಏನಾಗ್ತಾ ಇದೆ ನಿನಗೆ? ಮೈ ಹುಷಾರಾಗಿದೆ ತಾನೆ? ತಲೆನೋವಾ? ಇಲ್ಲೇ ಹೋಟೆಲಿನಲ್ಲಿ ಕಾಫಿ ಕುಡಿಯೋಣ, ಸರಿಯಾಗತ್ತೆ' ಅಂದಿದ್ದಕ್ಕೆ ಉಭ ಇಲ್ಲ, ಶುಭ ಇಲ್ಲದಂತೆ ಹಾಗೆ ನಡೆದು ಬಿಟ್ಟರು ಅಹಲ್ಯಬಾಯಿ. ಮತ್ತೆ ಈ ವರ್ತನೆ ರಿಪೀಟ್ ಆದಾಗ ರಾಯರು 'ಏಕೆ, ಏನಾಯಿತು?' ಅಂದಿದ್ದಕ್ಕೆ ಆಕೆ 'ಏನಿಲ್ಲ, ನಿಮ್ಮನ್ನ ನೋಡೋದಕ್ಕೆ ಮುಂಚೆ ಸಂಜೀವರಾವ್ ಅಂತ ಯಾರೋ ನನ್ನ ಮದುವೆ ಆಗ್ತೀನಿ